Reg no KKNN 12 — For Influential Publicity — 2-10-76

ಶ್ರೀ ಮಹೋತ್ಸವ ನೆರವೇರಿತು ವಜ್ರಮಹೋತ್ಸವ ನೇರವೇರಲಿರುವ ಪತ್ರಿ

ಸತ್ಯವಾದಿ

SATYAVADI

60 th Diamond Jubilee Year
ನೇ ವಜ್ರಮಹೋತ್ಸವ ವರ್ಷ

★ Satyavadi Daily . Mysore 4 ★

ಸ್ಥಾಪಕರು : ಅರಮನೆ ಸೇರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರಸಕ್ತ ಎಂ. ಎಸ್. ಕೃಷ್ಣರಾವ್ 15 ಪೈ

ನಾಳೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಮೆರವಣಿಗೆ

ಮೈಸೂರು — ದಸರಾ ಸಾಂಸ್ಕೃತಿಕ ಮತ್ತು ಕೈಗಾರಿಕಾ ಪ್ರದರ್ಶನ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಗಳಾದ ಡಿ. ಜಯಚೆವಾಜ ಅರಸ್ ಮತ್ತು ಬಿ. ಪಿ. ಲಿಂಗಯ್ಯ ಅವರು ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ, ವಿಶ್ವವಿಖ್ಯಾತ ದಸರಾ ಮೆರವಣಿಗೆ ನಾಳೆಯ ದಿನ ಮಧ್ಯಾಹ್ನ 2 ಗಂಟೆಗೆ ಅರಮನೆಯಿಂದ ಜನ್ಮೀ ಮಂಟಪಕ್ಕೆ ಬಿಜಯ ಮಾಡಲಿದೆ ಎಂದು ತಿಳಿಸಿದರು.

ಅರಮನೆಯ ಉತ್ತರ ದ್ವಾರದಲ್ಲಿ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್‌ರವರು, ರಾಜೇಂದ್ರ ಅನೆಯ ಮೇಲೆ ಅಲಂಕೃತವಾದ ಸ್ವರ್ಣ ಅಂಬಾರಿಯಲ್ಲಿ ಕಂಗೊಳಿಸುವ ಜಗನ್ಮಾತೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ವಿಗ್ರಹವನ್ನು ಒಳಗೊಂಡ ಅಕರ್ಷಣೀಯ ಮೆರವಣಿಕೆಯನ್ನು ಉದ್ಘಾಟಿಸುವರು.

ಭಾರತ ನಾತೆಯ ವಿಗ್ರಹವನ್ನು ಜಪಾನಿನಲ್ಲಿ ಮೆರವಣಿಗೆ ಮಾಡಲಾಗುವುದು ನಾಗಸ್ವರ ವಾದನ ಈ ವಿಗ್ರಹಗಳ ಮುಂದೆ ನಡೆಯುವದು.

ಮೆರವಣಿಗೆ ತಲಪುವ ಬನ್ನಿಮಂಟಪದಲ್ಲಿ ಬಾಣಬಿರುಸುಗಳ ಪ್ರದರ್ಶನ ಇರುತ್ತದೆ ಸಂಜೆ 7 ಗಂಟೆಗೆ ಅಲ್ಲಿ ಮುಖ್ಯ ಮಂತ್ರಿಗಳು ವಂದನೆ ಸ್ವೀಕರಿಸುವರು

ಈ ಹತ್ತು ಸ್ತಬ್ಧ ಚಿತ್ರಗಳು ಈ ಬಾರಿ ನಡೆಯುವ ಮೆರವಣಿಗೆಯಲ್ಲಿ ಭಾಗವಹಿಸುವುವು —

ಜಟಾಯುವಧೆ, ಅಕ್ಬರನ ನ್ಯಾಯಾಸ್ಥಾನ, ಗಾಂಧೀಜಿಯವರ ಪ್ರಾರ್ಥನಾ ಸಭೆ, ಕ್ರಹ್ಮಕುಮಾರಿ ಈಶ್ವರಿ ಮಂಡಲಿ, ದಕ್ಷಿಣ ಕನ್ನಡ ಜಿಲ್ಲೆಯ ಭೂತ ನೃತ್ಯ, ಉತ್ತರ ಕನ್ನಡ ಜಿಲ್ಲೆಯ ಕಂಸಾಳೆ ನೃತ್ಯ, ಕಾವೇರಿಯ ಮೇಲೆ ಶ್ರೀ ಜಯಚಾಮರಾಜ ಒಡೆಯರ್‌ರವರು ಕುಳಿತಿರುವುದು, ಎನ್ ಪಿ ಯವರದು ಕೆಲವು

ವಸ್ತು ಪ್ರದರ್ಶನ ಕಾರ್ಯಕ್ರಮ

ಮೈಸೂರು ನೆಪ್ಪಡೆಯ ಮೈದಾನದಲ್ಲಿರುವ ದಸರಾ ವಸ್ತು ಪ್ರದರ್ಶನದ ರಂಗ ಮಂಟಪದಲ್ಲಿ ಈ ಸಂಜೆ 7 ಗಂಟೆಗೆ ಶ್ರೀ ಬಿ ಕೆ ಶಂಕರ್‌ರವರಿಂದ ಹಾಡುಗಾರಿಕೆ 6 ಗಂಟೆಗೆ ಶ್ರೀಮತಿ ಶಾಂತ ಧನಂಜಯ ಮತ್ತು ಶ್ರೀ ಧನಂಜಯರವರಿಂದ ನೃತ್ಯ

ನಾಳೆ ಸಂಜೆ ಶ್ರೀಮತಿ ಹೆಚ್ ಎಸ್ ಶಾರದಾರವರಿಂದ ಗಾಯನ ಶ್ರೀ ಎ ಎನ್. ದೊರಿಸ್ವಾಮಿ ಮತ್ತು ತಂಡದವರಿಂದ ನಾಟಕ — ಶ್ರೀ ಪಾದುಕ ಪಟ್ಟಾಭಿಷೇಕ.

● ಸಂಡರ್‌ಲ್ಯಾಂಡ್ — ಪ್ರಸ್ಟಿಂಗ್ ಸಂಡರ್‌ಲ್ಯಾಂಡ್ ಕಾಲ್ಚೆಂಡು ಕ್ಲಬ್ ಲಿ ಸಿಸ್ಟನ ಸಿಟಿ ಕ್ಲಬ್‌ನ ಬಾಬ್‌ಲೀಯನ್ನು 2 ಲಕ್ಷ ಪೌಂಡು ಪಾವತಿಯಿಂದಲು, ಬೋಲ್ಡನ್ ವಾಂಡರರ್ಸ್ ಕ್ಲಬ್ ಗೋಲ್ ಕೀಪರ್ ಹ್ಯಾರಿ ಸಿಡ್ಡಾಲನ್ನು 90 ಸಾವಿರ ಪೌಂಡು ಪಾವತಿಯಿಂದಲು ಪಡೆದುಕೊಂಡಿದೆ.

ಜಲದಿಂದ ಮಳೆ

ದಾವಣಗೆರೆ — ಅಧ್ಯಾತ್ಮ ಮಂದಿರದಲ್ಲಿ 76 ವರ್ಷದ ಶ್ರೀ ರಾಮ ದೀಕ್ಷಿತರು ಪರ್ಜನ್ಯ ಜಪ ಮಾಡಿದ ನಂತರ ದಾವಣಗೆರೆ ಮತ್ತು ಗ್ರಾಮಾಂಗಳಲ್ಲಿ ಮಳೆ ಆಗಿದೆ

★

ಅಲಂಕರಿಸಿದ್ದ ಕತ್ತೆಗಳು

ದಾವಣಗೆರೆ — ಮಳೆಗಾಗಿ ಗ್ರಾಮದೆವ್ವಕ್ಕೆ ಗೊಳಿಸಲಾಗಿದ್ದ ಮೆರವಣಿಗೆಯಲ್ಲಿ ಹಲವು ಕತ್ತೆಗಳು ಇದ್ದವು.

ಪ 164/76-7

ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ, ಮೈಸೂರು

22-9-1976

ಪ್ರಕಟಣೆ

ಮೈಸೂರು-8 ರಲ್ಲಿರುವ ಸರ್ಕಾರಿ ಗಂಧದೆಣ್ಣೆ ಕಾರ್ಖಾನೆಗೆ ಈ ಕೆಳಗಿನ ಅಗರಬತ್ತಿ ಪದಾರ್ಥಗಳನ್ನು ಪರಬರಾಜು ಮಾಡಲು ರೂ 200 ಠೇವಣಿ ಮಾಡಿದ ಬ್ಯಾಂಕ್ ಡ್ರಾಫ್ಟ್ / ನಗದು ರಶೀತಿಯನ್ನೊಳಗೊಂಡ ಮೊಹರಾದ ಕೊಟೇಷನ್‌ಗಳನ್ನು 15-10-1976 ರ ವರೆಗೆ ಆಹ್ವಾನಿಸಲಾಗಿದೆ. ಮಾದರಿಗಳನ್ನು ಸ್ಪಷ್ಟವಾಗಿ ರೀತಿ ಕಳುಹಿಸಬೇಕು ಮತ್ತು ಒಡೆಯುವ ತಾರೀಖಿನಿಂದ ಕನಿಷ್ಠ 30 ದಿನಗಳ ವರೆಗೆ ದರಗಳು ಭದ್ರವಾಗಿರಬೇಕು.

1 ಖಾಯಿಸ್ ಡಿ ರೋಸ್ – 15ಕೆಜಿಗಳು
2 ಚಿಪ್ಪೆ – 60 ಕೆಜಿಗಳು
3 ಕ್ಲೋವ್ ಆಯಿಲ್ – 25 ಕೆಜಿಗಳು
4 ಕಲರೇಟೆಸ್ ಆಯಿಲ್ – 10ಕೆಜಿಗಳು
5 ಸ್ಯಾರಕ್ಸೆಲ್ ಆಟೆಟ್ – 10ಕೆಜಿಗಳು
6 ರೋಸ್ ಕ್ರಿಸ್ಟಲ್ಸ್ – 25 ಕೆಜಿಗಳು
7 ವೈಲ್ಯಾಂಗ್ ವೈಲ್ಯಾಂಗ್ 20ಕೆಜಿಗಳು

ಜನರಲ್ ಮ್ಯಾನೇಜರ್

ರಕ್ಷಿಸುವ ಯೋಜನೆ

ಪೀಕಿಂಗ್ — ಇತರ ಕಮ್ಯೂನಿಸ್ಟ್ ಮಹಾನ್ನಾಯಕರಂತೆ ಮಾವೊರವರ ಶರೀರವನ್ನು ರಾಸಾಯನಿಕ ದ್ರವ್ಯಗಳಿಂದ ಸ್ಥಳವೊಂದರಲ್ಲಿ ರಕ್ಷಣೆ ಮಾಡಿ, ಆ ಮೂಲಕ ದೇಶದ ಜನ ಗೌರವ ಸೂಚಿಸಲು ಅವಕಾಶ ಮಾಡಲೂ ಯೋಜಿಸಲಾಗಿದೆ.

●

ವಿದ್ಯಾರ್ಥಿನಿಲಯಗಳಲ್ಲಿ ಭೋಜನದ ವೆಚ್ಚವನ್ನು ಕಡಮೆ ಮಾಡುವಂತೆ ಕೇಂದ್ರ ರಾಜ್ಯಗಳಿಗೆ ಸೂಚಿಸಿದೆ

ದಾಖಲಾತಿ ಬೆಲೆ ನೀಡಿಕೆ

ನ್ಯೂಯಾರ್ಕ್ — ಇನ್ನೂರು ವರ್ಷಗಳಿಂದ ಕಾಣೆ ಆಗಿದ್ದ ಖ್ಯಾತ ಚಿತ್ರಕಾರ ರಾಂ ಬ್ರೆಂಡ್ಟ್ ವರ್ಣರಂಜಿತ ಐಶ್ವರ್ಯ ಹಾಗೂ ವಿವಾಹ ದೇವತೆ ಜೂನೋ ಚಿತ್ರವನ್ನು ಒಂದು ಎಣ್ಣೆ ಕಂಪೆನಿಯ ಕಾರ್ಯಕಾರಿ ಸಮಿತಿ ದಾಖಲಾತಿ ಬೆಲೆ 3 ಕೋಟಿ 25 ಲಕ್ಷಕ್ಕೆ ಕೊಂಡುಕೊಂಡರು.

●

ತಮಿಳಿನಲ್ಲಿ ತಿರುಪ್

ಮೈಸೂರು — ತಮಿಳುನಾಡಿನಲ್ಲಿ ಕ್ರಿಮಿನಲ್ ಕೇಸ್‌ಗಳು ಮುಂದಿನ ತಿಂಗಳು 14 ರ ನಂತರ ತೀರ್ಪುಗಳನ್ನು ತಮಿಳಿನಲ್ಲಿ ಕೊಡಲಾಗುವುದೆಂದು ಅಲ್ಲಿಯ ಅಧಿಕೃತ ಭಾಷಾ ಆಯೋಗದ ಅಧ್ಯಕ್ಷ ಶ್ರೀ ಎಸ್ ಮಹರಾಜನ್ ತಿಳಿಸಿದರು.

★

ಮೈಸೂರು ದಸರಾ ಕೈಗಾರಿಕಾ ಮತ್ತು ಸಾಂಸ್ಕೃತಿಕ
ಮಹೋತ್ಸವ (ವಸ್ತು ಪ್ರದರ್ಶನ ಸಮಿತಿ, ದೊಡ್ಡಕೆರೆ ಮೈದಾನ)
ದೊಡ್ಡಕೆರೆ ಮೈದಾನ ಮೈಸೂರು 10 ದೂರವಾಣಿ : 20886

ಪ್ರಕಟಣೆ

3-10-76 ರ ಭಾನುವಾರ ಮಧ್ಯಾಹ್ನ 2 ಗಂಟೆಗೆ
ಮಾನ್ಯ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ಅವರು
ಜನತಾ ದಸರಾ ಮೆರವಣಿಗೆ ಉದ್ಘಾಟಿಸುವರು
ಮೆರವಣಿಗೆ ವೀಕ್ಷಣೆಗೆ ಪುರಭವನ ಮೈದಾನದಲ್ಲಿ ಸುಖಾಸೀನ ವ್ಯವಸ್ಥೆ ಇದೆ
ಟಿಕೆಟ್ ಸಿಗುವ ಸ್ಥಳ : ಪುರಭವನ ಮೈದಾನ ವಸ್ತುಪ್ರದರ್ಶನ ಕಚೇರಿ
ವಸ್ತುಪ್ರದರ್ಶನ ಸ್ವಾಗತ ಸಮಿತಿ ಕಚೇರಿ
ಪ್ರವೇಶ ದರ : ರೂ. 25, 10, 5

ವರ್ಣರಂಜಿತ ಸಾಂಪ್ರದಾಯಿಕ ಟಾರ್ಚ್ ಲೈಟ್ ಪೆರೇಡ್ ಬನ್ನಿಮಂಟಪ
ಮೈದಾನ, ಮೈಸೂರು ಇಲ್ಲಿ 3-10-1976 ರ ಸಂಜೆ 6 ಗಂಟೆಗೆ ಏರ್ಪಡಿಸಿದೆ
ಮಾನ್ಯ ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸ್ ಅವರು
ಸೆಲ್ಯೂಟ್ ಸ್ವೀಕರಿಸುವರು ಸಂಜೆ 7-30 ಗಂಟೆಗೆ
ಪ್ರವೇಶ ದರ : ರೂ. 25, 10, 5 ಮತ್ತು 1

ಡಿ ಜಯದೇವರಾಜೇ ಅರಸು, ಬಿ. ಸಿ. ಲಿಂಗಯ್ಯ
ಪ್ರಧಾನ ಕಾರ್ಯದರ್ಶಿಗಳು

ವುಡ್‌ಲಾಂಡ್ 1 10 76 ರಿಂದ

ಅವೋಘ 2ನೇ ವಾರ

ರಂಗೀಲಾ ರತನ್

ಹಿಂದಿ

ಕಲರ್

ರಿಷಿಕಪೂರ್ ಪರ್ವೀಬಾಬಿ ಅಶೋಕಕುಮಾರ್ ಅಜಿತ್ ಅಭಿನಯ

ದಿನ 3 ಪ್ರದರ್ಶನಗಳು

ಅಪೆರಾ 17 9 76 ರಿಂದ

ವಿಜಯವಾಣಿ

ಶ್ರೀನಾಥ್ ಕಲ್ಪನ ದ್ವಾರಕೀಶ್ ರಾಜಾಶಂಕರ್ ಅಭಿನಯ

ಕನ್ನಡ ಪ್ರತಿ ದಿನ 3 ಪ್ರದರ್ಶನಗಳು

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram, Mysore 4

ಬಹುಮೊನ ವಿನಿಯೋಗ

ಮೈಸೂರು — ಉದ್ಯಾನ ಕಲಾ ಸಂಘದವರು ವ್ಯವಸ್ಥೆ ಮಾಡಿರುವ ಫಲ ಪುಷ್ಪ ಪ್ರದರ್ಶನದ ಬಹುಮಾನ ವಿತರಣೆಯನ್ನು ಈ ದಿನ ಸಂಜೆ 6 ಗಂಟೆಗೆ ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸ್‌ರವರು ನೆರವೇರಿಸುವರು ರಾಜ್ಯದ ತೋಟಗಾರಿಕೆ ಮಂತ್ರಿ ಶ್ರೀ ಕೆ. ಟಿ. ರಾಥೋಡ್‌ರವರು ಅಧ್ಯಕ್ಷತೆ ವಹಿಸುವರು.

ನೊಹಲ್ಲ ನಿರ್ಮಿತೀಕರಣ

ಮೈಸೂರು ಕೃಷ್ಣರಾಜ ನೊಹಲ್ಲ ನಿರ್ಮಾಲೀಕರಣ ಕಾರ್ಯವು ನಾಳೆದ್ದು ನಡೆಯುವುದು. ಅದಿನ ಪುರಸಭೆಯ ಕಮೀಷನರವರಿಗೆ ಜನರು ತಮ್ಮ ಕುಂದುಕೊರತೆಗಳನ್ನು ನಿವೇದಿಸಿಕೊಳ್ಳಬಹುದು.

ಗೋರಕ್ಷಣ'ಕೆ ಸಕಲ ನೆರವು ನೀಡಿ

ಲಕ್ಷ್ಮಿ

ಗೋರಕ್ಷಣೆ, ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣ" ವು ತನ್ನ ಬೆಳ್ಳಿ ಹಬ್ಬ ನೆರವೇರಿಸುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, "ಗೋರಕ್ಷಣ" ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

'ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

"ಸತ್ಯವಾದಿ" ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇನೆ.

ಸ್ವರ್ಣಮಹೋತ್ಸವ ಕಾಲದಲ್ಲಿ ಬೊರಿತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ.

SHAKTI SUDHA

A Superb Tonic